ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 6(491)

ಸದಸ್ಯರ ಹೆಸರು: ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ)

ಉತ್ತರಿಸುವವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1. ಕೊಡಗು ಜಿಲ್ಲೆ ಸೋಮವಾರಪೇಟೆ ನಗರಕ್ಕೆ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾರಂಗಿ ಹೊಳೆಯಿಂದ ಸೋಮವಾರಪೇಟೆ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಅಂದಾಜು ಪಟ್ಟಿ ತಯಾರಿಸಲಾಗಿದೆಯೇ? (ವಿವರ ನೀಡುವುದು)

ಉತ್ತರ

1. ಬಂದಿದೆ.

2. ಯೋಜನಾ ಸಾಧ್ಯತಾ ವರದಿ ತಯಾರಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚವು ರೂ.532.00 ಲಕ್ಷಗಳು. ಸದರಿ ಯೋಜನೆಯಲ್ಲಿ 4 ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಅವಕಾಶವಿದೆ. ಇದರಂತೆ ಇದರ ಪ್ರೋರೇಟಾ ವೆಚ್ಚವು ರೂ.354.66 ಲಕ್ಷಗಳು. ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಕಳೆದ 5 ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದೇನೆ. ಆದರೆ ಸರ್ಕಾರದ ಉತ್ತರದಲ್ಲಿ ಸರ್ಕಾರ ತೀವ್ರ ಪರಿಶೀಲನೆಯಲ್ಲಿದೆ ಎಂದು ''ತೀವ್ರ'' ಎನ್ನುವ ಪದವನ್ನು ಈ ಸಲ ಸೇರಿಸಿದ್ದಾರೆ. ಅದು ಬಿಟ್ಟು ಯಾವುದೇ ಭರವಸೆ ಆಗಲಿ, ನಾವು ಈ ಸಾರಿ ಮಾಡುತ್ತೇವೆ, ಈ ಸಲದ ಅಂದಾಜು ಪಟ್ಟಿಯಲ್ಲಿ ಸೇರಿಸುತ್ತೇವೆ ಎನ್ನುವ ಉತ್ತರ ಇಲ್ಲ. ಕಾವೇರಿ ಮತ್ತು ಹಾರಂಗಿ ನದಿಯಿಂದ ಕುಡಿಯುವ ನೀರು ಕೊಡುತ್ತಿದ್ದೇವೆ. ಇದರ ಜೊತೆಗೆ ರೈತರಿಗೆ ಸುಮಾರು 24 ಸಾವಿರ ಹೆಕ್ಟೇರ್‌ಗೆ ಜಮೀನಿಗೆ ನೀರು ಕೊಡುತ್ತಿದ್ದೇವೆ. ಆದರೆ ನಮ್ಮ ಸೋಮವಾರಪೇಟೆಯಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಬಹಳ ಶೋಚನೀಯವಾದ ಪರಿಸ್ಥಿತಿ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಈ ಪ್ರಸ್ತಾವವನ್ನು ಸೇರಿಸಿ ಕುಡಿಯುವ ನೀರಿನ ಹಾಹಾಕಾರವನ್ನು ನೀಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಇಲ್ಲಿನ ಸಮಸ್ಯೆ ಕೂಡ ನಾನು ಚಾಮರಾಜನಗರದ ಕುಡಿಯುವ ನೀರಿನ ವ್ಯವಸ್ಥೆಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ನಗರಾಭಿವೃದ್ಧಿ ಇಲಾಖೆ ಮತ್ತು ಆರ್‌ಡಿಪಿಆರ್ ಇಲಾಖೆ ಇವರುಗಳಲ್ಲಿ ಒಂದು ರೀತಿಯ ಸಮನ್ವಯ ಅಭಾವದ ಕಾರಣ ಪತ್ರ ವ್ಯವಹಾರದ ಮೂಲಕ ಇಂತಹ ಅಗತ್ಯವಾಗಿರತಕ್ಕಂಥ ಕುಡಿಯುವ ನೀರಿನ ಸರಬರಾಜಿನ ಯೋಜನೆಗಳು ನಿಧಾನವಾಗುತ್ತಾ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಡೆವಲಪ್‌ಮೆಂಟ್ ಕಮೀಷನರ್ ಅನ್ನು ಮೇಲ್ವಿಚಾರಕರನ್ನಾಗಿ ಮಾಡಿ ಈ ಆರ್.ಡಿ.ಪಿ.ಆರ್. ಮತ್ತು ಅರ್ಬನ್ ವಾಟರ್ ಬೋರ್ಡ್ ಈ ಎರಡೂ ಇಲಾಖೆಗಳಲ್ಲಿ ನಾವು ಸಮನ್ವಯವನ್ನು ತರುವುದರ ಮೂಲಕ ಇಂತಹ ಯೋಜನೆಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕಾದಂತಹ ಔಚಿತ್ಯವನ್ನು ನಾವು ಮನಗಂಡಿದ್ದೇವೆ, ಇಲ್ಲಿ ನಾಲ್ಕು ಹಳ್ಳಿಗಳು ಬಂದಿವೆ. ಸೋಮವಾರಪೇಟೆಗೆ ನಾವು ಹಾರಂಗಿಯಿಂದ ಏನು ನೀರು ತರಬೇಕೆಂದು ತೀರ್ಮಾನ ಮಾಡಿದ್ದೇವೆ ಆ ನೀರು ಸೋಮವಾರಪೇಟೆಗೆ ಬರತಕ್ಕಂಥ ಕಾಲದಲ್ಲಿ ನಾಲ್ಕು ಹಳ್ಳಿಗಳು ಏನು ಇವೆ ಅವರಿಗೂ ನೀರು ಕೊಡಬೇಕು ಎನ್ನತಕ್ಕಂಥಾದ್ದು. ಈ ಯೋಜನೆಯ ಪೂರ್ಣ ವಿವರ, ಈ ಯೋಜನೆಯ ವಿನ್ಯಾಸವನ್ನು ತಯಾರು ಮಾಡಿದ್ದೇವೆ, ನಾನು ಡೆವಲಪ್‌ಮೆಂಟ್ ಕಮೀಷನರ್‌ಗೆ ಹೇಳಿ ಆದಷ್ಟು ಬೇಗ ಈ ಹೊಂದಾಣಿಕೆ ಸಾಧಿಸಿ, ಸೋಮವಾರಪೇಟೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಚಾಲ್ತಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಈ ಸಲದ ಬಜೆಟ್‌ನಲ್ಲಿ ಸೇರಿಸಿದರೆ ಬಹಳ ಉತ್ತಮವಾಗುತ್ತಿತ್ತು. ನಾವು ಇಡೀ ಬೆಂಗಳೂರಿಗೆ ಕುಡಿಯುವ ನೀರನ್ನು ಕೊಡಗಿನಿಂದ ಕೊಡುತ್ತಿದ್ದೇವೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಬಜೆಟ್‌ನಲ್ಲಿ ಬರುವುದಿಲ್ಲ ಏಕೆಂದರೆ ಇವು ಅರ್ಬನ್ ಡೆವಲಪ್‌ಮೆಂಟ್ ವಾಟರ್ ಬೋರ್ಡ್ ಮೂಲಕ ಮಾಡತಕ್ಕಂಥ ಯೋಜನೆಗಳಾದುದರಿಂದ ಬಜೆಟ್‌ಗೆ ಬಾರದಿದ್ದರೂ ಕೂಡ ಸೋಮವಾರಪೇಟೆಗೆ ನೀರು ಕೊಡತಕ್ಕಂಥ ನಮ್ಮ ಉದ್ದೇಶ ಏನು ಇದೆ ಆ ಉದ್ದೇಶವನ್ನು ಈಡೇರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಈ ವರ್ಷವೇ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಜಲಸಂವರ್ಧನ ಯೋಜನೆ.